ವ್ಯವಸ್ಥೆಯನ್ನು ಕಾಯ್ದಿರಿಸಿಕೊಳ್ಳಬೇಕಾಗುತ್ತದೆ. ಈಗ ಚಳಿಗಾಲವಾದುದರಿಂದ ನಮಗೇನೂ ಅಂತಹ ತೊಂದರೆಯಾಗಲಿಲ್ಲ.

ನ್ಯೂಪೋರ್ಟ್‌ನಲ್ಲಿನ ಎಲ್ಲ ಮ್ಯಾನ್ಷನ್‌ಗಳನ್ನು ನೋಡಲು ಒಟ್ಟಾರೆ 49 ಡಾಲರುಗಳ ಸೀಸನ್ ಟಿಕೆಟ್ ಪಡೆಯಬಹುದು. 26 ಡಾಲರು ನೀಡಿ ಒಂದೊಂದಕ್ಕೆ ಪ್ರತ್ಯೇಕವಾಗಿಯೂ ಪ್ರವೇಶ ಟಿಕೆಟ್ ಪಡೆಯಬಹುದು. ನಾವು ಆಯ್ದುಕೊಂಡಿದ್ದು ಮ್ಯಾನ್ಷನ್‌ಗಳಲ್ಲೇ ಅತಿ ದೊಡ್ಡದಾದ ಹಾಗೂ ಜನಪ್ರಿಯವಾದ ಬ್ರೇಕರ್ ಮ್ಯಾನ್ಷನ್ ಅನ್ನು. ಹದಿಮೂರು ಎಕರೆಗಳಲ್ಲಿ ಅಟ್ಲಾಂಟಿಕ್ ಸಾಗರದೆದುರು ನವೋದಯ ಕಾಲದ ಇಟಾಲಿಯನ್ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಭವನವಿದು. ಸಾಗರದ ಅಲೆಗಳು ಇದರಂಚಿನ ಹೆಬ್ಬಂಡೆಗಳಿಗೆ ಭೋರ್ಗರೆದು ಅಪ್ಪಳಿಸಿ ಸಿಡಿಯುವುದರಿಂದ 'ಬ್ರೇಕರ್ಸ್' ಎಂದು ಈ ಭವನಕ್ಕೆ ಹೆಸರಿಡಲು ಕಾರಣವಂತೆ.

ಕಾರ್ನೇಲಿಯಸ್ ವಾಂಡೆರಬಿಲ್ಟ್ ಎಂಬಾತ 18ನೇ ಶತಮಾನದಲ್ಲಿ ವ್ಯಾಪಾರಿ ಹಡಗುಗಳ ಒಡೆಯನಾಗಿದ್ದ. ನಂತರದಲ್ಲಿ ನ್ಯೂಯಾರ್ಕಿನ 'ಸೆಂಟ್ರಲ್ ರೇಲ್ ರೋಡ್' ಸಂಸ್ಥೆಯನ್ನು ಆರಂಭಿಸಿ, ನ್ಯೂಯಾರ್ಕ್ ನಗರಕ್ಕೆ ರೈಲುಗಳ ಜಾಲವನ್ನು ಪರಿಚಯಿಸಿದ. ಹತ್ತೊಂಬತ್ತನೇ ಶತಮಾನದ ಅಂತ್ಯದವರೆಗೆ ಇದು ಅಮೆರಿಕೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿತ್ತು. ಈ ಉದ್ದಿಮೆಯು ವಾಂಡರಬಿಲ್ಡ್ ಕುಟುಂಬಕ್ಕೆ ಆರ್ಥಿಕ ಆದಾಯವಲ್ಲದೇ ಅಮೆರಿಕೆಯ ರಾಯಲ್ ಕುಟುಂಬದ ಸ್ಥಾನಮಾನವನ್ನೂ ತಂದುಕೊಟ್ಟಿತ್ತು.

ವಾಂಡರಬಿಲ್ಟನ ಏಳನೆಯ ಮಗಳಾದ ಗ್ಲಾಡೀಸಳು 1934ರಲ್ಲಿ ತನ್ನ ತಾಯಿಯ ಮರಣಾನಂತರ ಇದರ ವಾರಸುದಾರಳಾದಳು ಮತ್ತು ಕೆಲದಿನಗಳಲ್ಲಿಯೇ 'ನ್ಯೂಪೋರ್ಟ್ ಪ್ರಿಸರ್ವೇಶನ್ ಸೊಸೈಟಿ' ಎಂಬ ಸಂಸ್ಥೆಯ ಸಲುವಾಗಿ ಹಣ ಕೂಡಿಸಲು ಇದನ್ನು ಸಾರ್ವಜನಿಕರ ವೀಕ್ಷಣೆಗೆ, ಮದುವೆ ಮತ್ತಿತರೆ ಸಮಾರಂಭಗಳಿಗೆ ನೀಡತೊಡಗಿದಳು. ಪ್ರಸ್ತುತ ಅದೇ ಸೊಸೈಟಿಯು ಇದರ ವಹಿವಾಟನ್ನು ನಿರ್ವಹಿಸುತ್ತಿದೆ. ಈಗ ಈ ಮ್ಯಾನ್ಷನ್ ಅನ್ನು 'ರಾಷ್ಟ್ರೀಯ ಐತಿಹಾಸಿಕ ಹೆಗ್ಗುರುತು' ಎಂದು ಘೋಷಿಸಲಾಗಿದೆ.

## ತ್ರಿಕೋನ ವ್ಯಾಪಾರ

1639ರಲ್ಲಿ ಮೆಸ್ಸಾಚುಸೆಟ್ಸ್‌ನ ಬೋಸ್ಟನ್ನಿನ ಕೆಲವರು ನ್ಯೂ ಇಂಗ್ಲೆಂಡ್‌ನ ಈ ಭಾಗದಲ್ಲಿ ಅಂದಿನ ನ್ಯಾರ್ಗನ್ಸೆಟ್ ಎಂಬ ಮೂಲ ನಿವಾಸಿಗಳಿಂದ ಈ ದ್ವೀಪದ ಉತ್ತರ ದಂಡೆಯ ಭೂಮಿಯನ್ನು ಒಪ್ಪಂದಕ್ಕೆ ಪಡೆದು ನೆಲೆಸತೊಡಗಿದರು. ಇಲ್ಲಿಯೇ ಬಂದರೊಂದನ್ನು ಸ್ಥಾಪಿಸಿ ಕೆರೆಬಿಯನ್ ದೇಶಗಳಲ್ಲಿ ತಂಬಾಕು, ಸಕ್ಕರೆ ಹಾಗೂ ಮೊಲಾಯಿಸಸ್ ಪಡೆದು ಅದನ್ನು ನ್ಯೂಪೋರ್ಟಿಗೆ ತಂದು ಶುದ್ಧೀಕರಿಸಿ 'ರಮ್' ತಯಾರಿಸುತ್ತಿದ್ದರು. 1700ರಿಂದ 1807ರವರೆಗೆ ಇದು

